ಶ್ರೀ ವಿ. ಎನ್. ಪಾಟೀಲ್—ಮಹಾರಾಷ್ಟ್ರದಲ್ಲಿ ಇರುವ ಬನ್ಸು ಪ್ರತಿಯೊಂದು ಹಳ್ಳಿಗಳಲ್ಲೂ ಓಡಾಡುತ್ತ ಇವೆ. ನಮ್ಮ ರಾಜ್ಯದಲ್ಲೂ ಕೂಡ ಇರುವ ಹಳ್ಳಿಗಳಲ್ಲಿ ಎಲ್ಲ ಬನ್ಸುಗಳೂ ಓಡಲು ಅನುಕೂಲ ಮಾಡಿಕೊಡುತ್ತಾರೆಯೇ ಎಂದು ಮಾನ್ಯ ಸದಸ್ಯರು ಸರಕಾರವನ್ನು ಕೇಳುತ್ತಿರುವುದು ?

ಶ್ರೀ ಅಜೀಜ್ ಸೇಟ್ .—ಅವರ ಪ್ರಶ್ನೆ ಒಂದು ರೀತಿಯಾಗಿ ವೇಗ್ ಆಗಿದೆ ಮತ್ತು ನಿರ್ದಿಷ್ಟವಾಗಿ ಕೇಳುತ್ತಿಲ್ಲ. ಈಗ ಇದರಲ್ಲಿ ಮೂರು ಹಳ್ಳಿಗಳ ಬಗ್ಗೆ ಹೇಳಿದರು ಅದನ್ನು ಸರ್ವೆ ಮಾಡಿಸುತ್ತಿದ್ದೇವೆ ಮಿಕ್ಕ ಇತರ ಹಳ್ಳಿಗಳ ಬಗ್ಗೆ ಹೇಳಿದ್ದಾರೆ ಅದನ್ನು ಮತ್ತೆ ಪರಿಶೀಲನೆ ಮಾಡಿಸುತ್ತೇವೆ.

ಶ್ರೀ ವಿ. ಎನ್. ಪಾಟೀಲ್.—ಮಹಾರಾಷ್ಟ್ರದಲ್ಲಿ ಎಲ್ಲ ಹಳ್ಳಿಗಳಲ್ಲೂ ಬನ್ಸುಗಳು ಓಡಾಡುತ್ತಿವೆ. ಅದರಂತೆ ಇಲ್ಲೂ ಮಾಡಲಾಗುವುದಿಲ್ಲವೇ ?

ಶ್ರೀ ಅಜೀಜ್ ಸೇಟ್.—ಮಹಾರಾಷ್ಟ್ರದಲ್ಲಿ ಹೋಗುತ್ತಿವೆ ಎಂದು ಇಲ್ಲೂ ಬನ್ಸುಗಳನ್ನು ಎಲ್ಲ ಹಳ್ಳಿಗಳಲ್ಲೂ ಓಡಿಸಲಾಗುವುದಿಲ್ಲ. ಇಲ್ಲಿನ ಕಚ್ಚಾ ರಸ್ತೆಗಳು ಹೇಗಿವೆ ಮತ್ತು ಇದು ಎಕನಾಮಿಕರ್ ಆಗುತ್ತದೆಯೇ ಇಲ್ಲವೇ ಎನ್ನುವುದನ್ನೆಲ್ಲಾ ಸರ್ವೆ ಮಾಡಿ ನೋಡಿ ಆ ನಂತರ ಬನ್ಸುಗಳನ್ನು ಓಡಿಸುವ ವಿಚಾರ ಮಾಡಬೇಕು. ಇದರಲ್ಲಿ ಎಲ್ಲ ರೂಟುಗಳೂ ನ್ಯಾಷನಲೈಜಾಗಿವೆಯೇ ಇಲ್ಲವೇ ಇವನ್ನೆಲ್ಲಾ ನೋಡಬೇಕಾಗುತ್ತದೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ನಮ್ಮಲ್ಲಿ ಎಲ್ಲ ಬನ್ಸುಗಳೂ ನ್ಯಾಷನಲೈಜಾಗಿವೆ. ಯಾವ ಖಾಸಗಿ ಬನ್ಸುಗಳು ಬರಲವಕಾಶವಿಲ್ಲ. ಮಹಾರಾಷ್ಟ್ರದಲ್ಲಿರುವಂತೆ ಇಲ್ಲೂ ಕೂಡ ಎಲ್ಲ ಹಳ್ಳಿಗಳಲ್ಲೂ ಬನ್ಸುಗಳು ಓಡಾಡುವಂತೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಅಜೀಜ್ ಸೇಟ್.—ಇದನ್ನು ಪರಿಶೀಲನೆ ಮಾಡಿಸಿ ಹೇಳುತ್ತೇನೆ.

OLD AYACUTS IN RAICHUR AND BELLARY DISTRICTS

183. Sri C. N. PATIL (Lingsugur).—

Will the Minister of State for Major Irrigation be pleased to state :—

(*a*) the number of old Ayacuts in Raichur and Bellary Districts on Tungabhadra River with their names and localised areas ;

(*b*) whether repairs to these 'Anicuts' were effected by State Government after S.R.C. ;

(*c*) whether Government has any proposal to carry out repairs to the Hulgi and Ramasagar Anicut and canals and if so, when the work will be started ?

Sri H. N. NANJE GOWDA (Minister of State for Major Irrigation).—

(*a*) There are 10 old Ayacuts in Bellary District and 5 old ayacuts in Raichur District. The names and ayacuts of which are as mentioned below :

Bellary District :	*Localised area*
(1) Basavanna Channel ..	.. 249.71
(2) Raya Channel ..	.. 3713.97
(3) Hosur Anicut and Bella Channel	.. 1211.18

Bellary District	*Localised area*
(4) Kalghatta Channel	520.25
(5) Thurtha Channel	2202.84
(6) Ramasagar Anicut and Channel. ..	1632.80
(7) Kampli Channel	1136.99
(8) Belgodahalu channel	517.08
(9) Siruguppa Anicut and Channel.. ..	1857.94
(10) Deshnoor Channel	1170.02
Raichur District:	
(1) Hulgi Channel	654.22
(2) Shivapur Anicut and Channel	290.13
(3) Sanapur Anicut and Channel	2123.23
(4) Upper and Lower Gangavathi Channel ..	3812.00
(5) Bichal Channel	649.52

(*b*) Yes.

(*c*) Yes. The work is proposed to be started during May, 1973.

ಶ್ರೀ ಸಿ. ಎನ್. ಪಾಟೀಲ್.—ನಮ್ಮ ರಾಯಚೂರು ನಾರೆ ಬಳಿ ಇರುವ ಶಿವಪುರ ಆಣೆಕಟ್ಟು ಮಾಡಿದರೆ ಇದರಿಂದ ಸುಮಾರು 990.13 ಎಕರೆಗಳಷ್ಟು ಭೂಮಿಗೆ ನೀರು ಸಿಕ್ಕಿ ಅನುಕೂಲ ವಾಗುತ್ತದೆ, ಇದು ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಹೆಚ್. ಎನ್ ನಂಜೇಗೌಡ.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಸಿ ಎನ್. ಪಾಟೀಲ್.—ಶಿವಪುರ ಆಣೆಕಟ್ಟು ಆಗಿಲ್ಲದಿರುವುದರಿಂದ ಈಗ ತುಂಗಭದ್ರಾ, ಲೆಫ್ಟ್ ಬ್ಯಾಂಕ್ ಚಾನಲ್‌ನಿಂದ ನೀರು ತೆಗೆಯಬೇಕಾಗಿದೆ. ಆದುದರಿಂದ ಶಿವಪುರ ಆಣೆಕಟ್ಟನ್ನು ಬೇಗನೆ ರಿಪೇರಿ ಮಾಡಿಸಿಕೊಡುತ್ತೀರಾ ?

ಶ್ರೀ ಹೆಚ್. ಎನ್. ನಂಜೇಗೌಡ.—ಇದನ್ನು ಪರಿಶೀಲನೆ ಮಾಡಬಹುದು.

ಶ್ರೀ ಸಿ. ಎನ್. ಪಾಟೀಲ್.—ಹುಲಗಿ ಆಣೆಕಟ್ಟಿನ ರಿಪೇರಿಯನ್ನು 1973 ನೇ ಮೇ ತಿಂಗಳಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ಇದರ ಅಂದಾಜುಗಳು ತಯಾರಾಗಿವೆಯೇ ?

ಶ್ರೀ ಹೆಚ್. ಎನ್. ನಂಜೇಗೌಡ—ತೆಗೆದುಕೊಳ್ಳಬೇಕೆಂದು ಎಸ್ಟಿಮೇಟುಗಳು ಮಾಡ ಲಾಗಿದೆ. ಇದರ ವಿವರಗಳು ಬೇಕೆಂದರೆ ನೋಟೀಸು ಕೊಟ್ಟರೆ ನಂತರ ಒದಗಿಸಿಕೊಡುತ್ತೇವೆ, ಈಗಾಗಲೇ 99.99ಲಕ್ಷ ರೂಪಾಯಿಗಳಷ್ಟು ಹಣ ಮಂಜೂರು ಮಾಡಿ ಇಂತಹ ರಿಪೇರಿ ಕೆಲಸಗಳನ್ನು ಮಾಡಲು ಕಾರ್ಯಗಳು ಆರಂಭವಾಗಿವೆ ಮತ್ತು ಕೆಲವು ಕಡೆ ಕೆಲಸಗಳು ಪ್ರಗತಿಯ ಹಾದಿಯಲ್ಲಿವೆ. ಆದಷ್ಟು ರಿಪೇರಿ ಕೆಲಸಗಳನ್ನು ಬೇಗನೆ ಮಾಡಬೇಕೆಂದು ಕೆಲಸ ಮಾಡಲಾಗಿದೆ. ಮಾನ್ಯ ಸದಸ್ಯರು ಅವಶ್ಯವಾಗಿದೆ ಎಂದು ಹೇಳುವ ಕೆಲಸಗಳನ್ನೂ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.